ದೀಕ್ಷಾಸ್ನಾನ ಮತ್ತು ದೇವರೊಂದಿಗಿನ ನಿಮ್ಮ ಸಂಬಂಧ (ಭಾಗ 1)

ಇದು jw.org/kn ವೆಬ್‌ಸೈಟಿನಲ್ಲಿರುವ *ಬೈಬಲ್ ನಿಜವಾಗಿಯೂ ಏನನ್ನು ಬೋಧಿಸುತ್ತದೆ?* ಪುಸ್ತಕದ ಅಧ್ಯಾಯ 18ರ ಮೇಲೆ ಆಧರಿಸಿದೆ.

ಉದ್ದೇಶ: ನೀವೇನು ನಂಬುತ್ತೀರಿ ಮತ್ತು ಅದನ್ನು ಯಾಕೆ ನಂಬುತ್ತೀರಿ ಎಂದು ತಿಳಿಯಿರಿ. ಅದರ ಬಗ್ಗೆ ಬೈಬಲ್ ಏನನ್ನು ಕಲಿಸುತ್ತದೆ ಎಂದು ಪರೀಕ್ಷಿಸಿ. ನೀವು ನಂಬುವ ವಿಷಯಗಳನ್ನು ಬೇರೆಯವರಿಗೆ ಹೇಗೆ ವಿವರಿಸಬಹುದು ಎಂದು ಸಹ ಯೋಚಿಸಿ.



ಕ್ರೈಸ್ತರು ದೀಕ್ಷಾಸ್ನಾನ ತೆಗೆದುಕೊಳ್ಳಲೇಬೇಕಾ?

1 ನಿಮ್ಮ ನಂಬಿಕೆ ತಿಳಿಯಿರಿ

ಕೆಲವರು ಯಾಕೆ ಹೌದು ಎಂದು ಹೇಳುತ್ತಾರೆ?

ಕೆಲವರು ಯಾಕೆ ಇಲ್ಲ ಎಂದು ಹೇಳುತ್ತಾರೆ?

ನೀವು ಏನು ನಂಬುತ್ತೀರ?

ನೀವು ಯಾಕೆ ಹಾಗೆ ನಂಬುತ್ತೀರ?

www.jw.org © 2017 Watch Tower Bible and Tract Society of Pennsylvania

2 ಬೈಬಲ್ ಏನು ಕಲಿಸುತ್ತದೆ ಎಂದು ಪರೀಕ್ಷಿಸಿರಿ

ಕ್ರೈಸ್ತರು ದೀಕ್ಷಾಸ್ನಾನ ತೆಗೆದುಕೊಳ್ಳಬೇಕು ಅಥವಾ ನೀರಿನಲ್ಲಿ ಪೂರ್ಣವಾಗಿ ಮುಳುಗಬೇಕು.
(ಬೈಬಲ್ ಬೋಧಿಸುತ್ತದೆ ಪುಸ್ತಕದ 18ನೇ ಅಧ್ಯಾಯದ 1-4 ಪ್ಯಾರಗಳನ್ನು ನೋಡಿ.)

ಮತ್ತಾಯ 28:19; ಅಪೊಸ್ತಲರ ಕಾರ್ಯಗಳು 8:35, 36 ಓದಿ.
ಕ್ರಿಸ್ತನ ಹಿಂಬಾಲಕರು ದೀಕ್ಷಾಸ್ನಾನ ತೆಗೆದುಕೊಳ್ಳಲು ಯಾವುದು ಅವರನ್ನು ಪ್ರಚೋದಿಸುತ್ತದೆ?

ಕೀರ್ತನೆ 40:7, 8 ಓದಿ.
ದೀಕ್ಷಾಸ್ನಾನದ ಬಗ್ಗೆ ಯೋಚಿಸುತ್ತಿರುವ ಒಬ್ಬ ವ್ಯಕ್ತಿಗೆ ದೇವರ ಚಿತ್ತವನ್ನು ಮಾಡುವುದರ ಬಗ್ಗೆ ಏನನಿಸುತ್ತದೆ?



ವಿವೇಕಿಯು ಮನೆಯನ್ನು ಕಟ್ಟುವುದಕ್ಕಿಂತ ಮುಂಚೆ ಅದಕ್ಕೆ ಬೇಕಾದ ಯೋಜನೆಗಳನ್ನು ಮಾಡುತ್ತಾನೆ. ಅದೇ ರೀತಿ ದೀಕ್ಷಾಸ್ನಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ವಿವೇಕಿಯು ದೇವರು ತನ್ನಿಂದ ಏನು ಬಯಸುತ್ತಾನೆ ಎಂದು ತಿಳಿಯಲು ದೇವರ ವಾಕ್ಯವನ್ನು ಅಧ್ಯಯನ ಮಾಡುತ್ತಾನೆ.—ಲೂಕ 14:27-30

www.jw.org © 2017 Watch Tower Bible and Tract Society of Pennsylvania

ನಾವು ದೀಕ್ಷಾಸ್ನಾನ ತೆಗೆದುಕೊಳ್ಳುವ ಮುಂಚೆ ನಿಷ್ಕೃಷ್ಟ ಜ್ಞಾನವನ್ನು ಪಡೆದುಕೊಳ್ಳಬೇಕು ಮತ್ತು ನಂಬಿಕೆಯನ್ನು ಬೆಳೆಸಿಕೊಳ್ಳಬೇಕು.

(ಬೈಬಲ್ ಬೋಧಿಸುತ್ತದೆ ಪುಸ್ತಕದ 18ನೇ ಅಧ್ಯಾಯದ 5-7 ಪ್ಯಾರಗಳನ್ನು ನೋಡಿ.)

ಇಬ್ರಿಯ 5:12 ಓದಿ.

ದೀಕ್ಷಾಸ್ನಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಬೈಬಲಿನ ಬಗ್ಗೆ ಎಷ್ಟು ತಿಳಿದುಕೊಂಡಿರಬೇಕು?

ಅಪೊಸ್ತಲರ ಕಾರ್ಯಗಳು 4:12; 2 ತಿಮೊಥೆಯ 3:16, 17; ಮತ್ತು ಇಬ್ರಿಯ 11:6 ಓದಿ.

ದೀಕ್ಷಾಸ್ನಾನ ಪಡೆದ ಕ್ರೈಸ್ತನಾಗಿ ಯಶಸ್ವಿಯಾಗಲು ಯಾವುದರಲ್ಲಿ ನಂಬಿಕೆ ಇಡುವುದು ಅಗತ್ಯ?

ನಿಮ್ಮ ಜ್ಞಾನ ಮತ್ತು ನಂಬಿಕೆಯನ್ನು ಹೆಚ್ಚಿಸಿಕೊಳ್ಳಲು ಏನು ಮಾಡುತ್ತೀರಿ? ಉದಾಹರಣೆ ಕೊಡಿ.

www.jw.org © 2017 Watch Tower Bible and Tract Society of Pennsylvania

3 ನಿಮ್ಮ ನಂಬಿಕೆಯನ್ನು ವಿವರಿಸಿರಿ

ಯಾರಾದರೂ ಹೀಗೆ ಹೇಳಿದರೆ . . .

ಮಗುವೊಂದು ದೀಕ್ಷಾಸ್ನಾನ ಪಡೆದಾಗ ದೇವರು ಅದನ್ನು ಪಾಪದಿಂದ ಶುದ್ಧೀಕರಿಸುವನು.

ನೀವು ಹೀಗೆ ಹೇಳಬಹುದು . . .

ತುಂಬ ಜನ ಹೀಗೆ ಹೇಳುತ್ತಾರೆ. ಆದರೆ ನಾನು ಇದನ್ನು ನಂಬುವುದಿಲ್ಲ. ಯಾಕೆಂದರೆ . . .

_____

_____

ನೀವು ಅವರಿಗೆ ಯಾವ ವಚನವನ್ನು ತೋರಿಸುತ್ತೀರಿ?

_____

ವ್ಯಕ್ತಿಯ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟು ಈ ವಚನವನ್ನು ನೀವು ಹೇಗೆ ತರ್ಕಿಸುತ್ತೀರಿ?

_____

ಯಾರಾದರೂ ಹೀಗೆ ಹೇಳಿದರೆ . . .

ನೀವು ಯೇಸುವನ್ನು ರಕ್ಷಕನಾಗಿ ಸ್ವೀಕರಿಸಿದಾಗ ನೀವು ದೀಕ್ಷಾಸ್ನಾನಕ್ಕೆ ಸಿದ್ಧರಾಗಿದ್ದೀರಿ ಎಂದರ್ಥ.

ನೀವು ಹೀಗೆ ಹೇಳಬಹುದು . . .

ಯೇಸುವಿನಲ್ಲಿ ನಂಬಿಕೆ ಇಡುವುದು ಪ್ರಾಮುಖ್ಯ. ಆದರೆ ದೀಕ್ಷಾಸ್ನಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ಕೆಲವೊಂದು ಗಂಭೀರವಾದ ವಿಷಯ ಮಾಡಬೇಕು ಅಂತ ನಾನು ನಂಬುತ್ತೇನೆ. ಯಾಕೆಂದರೆ . . .

_____

_____

ನೀವು ಅವರಿಗೆ ಯಾವ ವಚನವನ್ನು ತೋರಿಸುತ್ತೀರಿ?

_____

ವ್ಯಕ್ತಿಯ ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟು ಈ ವಚನವನ್ನು ನೀವು ಹೇಗೆ ತರ್ಕಿಸುತ್ತೀರಿ?

_____

www.jw.org © 2017 Watch Tower Bible and Tract Society of Pennsylvania